ದಿನಾಂಕ – 24/02/2025

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಶ್ರೀ K.H.S. ವಕೀಲರಿಂದ –**

ನಾನು ಈ ಕೇಸಿನಲ್ಲಿ ಎದುರುದಾರರ ಕಂಪನಿಯ ಎಕ್ಸಿಕ್ಯುಟಿವ್ ಮ್ಯಾನೇಜರ್ ಆಗಿರುತ್ತೇನೆ. ನನ್ನ ಮುಖ್ಯ ಸಾಕ್ಷ್ಯದ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳನ್ನು ನಾನೇ ಹೇಳಿ ಬರೆಸಿದ್ದು, ಅವು ಸತ್ಯವಾಗಿರುತ್ತವೆ ಹಾಗೂ ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ನನ್ನ ಮುಖ್ಯ ಸಾಕ್ಷ್ಯಕ್ಕೆ ಪೂರಕವಾಗಿ, ಡಿ.ಸಿ. ಕಚೇರಿಯ ಅಧಿಕೃತ ಜ್ಞಾಪನ, ಮೆಮೋ ಆಫ್ ಪರ್ಟಿಕ್ಯುಲರ್ಸ್, ಸರ್ವೆ ನಂ.580/1 ರ ಪಹಣಿ ಪತ್ರಿಕೆ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ..ಆರ್.–1 ರಿಂದ 3 ಎಂದು ಗುರುತಿಸಲಾಯಿತು.

**– ಪಾಟೀ ಸವಾಲು – ಶ್ರೀ ಆರ್.ಬಿ. ವಕೀಲರಿಂದ –**

ಅರ್ಜಿದಾರರ 95 ಗುಂಟೆ ಜಮೀನಿನಲ್ಲಿ ವಿದ್ಯುತ್ ಲೈನು ಎಳೆಯಲಾಗಿದೆ. ಅರ್ಜಿದಾರರು ಮತ್ತು ನಮ್ಮ ಕಂಪನಿ ಮಧ್ಯೆ ಒಂದು ಕರಾರು ಪತ್ರ ಆಗಿದೆ ಎಂದರೆ ಸರಿ. ಸದರ್ ದಾಖಲೆ ನಮ್ಮ ಕಚೇರಿಯಲ್ಲಿದೆ. ಈಗ ನನಗೆ ಒಂದು ಕರಾರು ಪತ್ರದ ಫೋಟೋ ಪ್ರತಿಯನ್ನು ತೋರಿಸುತ್ತಿದ್ದು ಸದರ್ ದಾಖಲೆಯಂತೆ ನಮ್ಮ ಮತ್ತು ಅರ್ಜಿದಾರರ ಮಧ್ಯೆ ಕರಾರು ಆಗಿರುತ್ತದೆ. ಗಿಡ ಮರ ಮತ್ತು ಬೆಳೆಗಳ ಪರಿಹಾರವಾಗಿ ಅಧಿಕಾರ ವಹಿಸಿದ್ದುದು ಎಂದು ಸದರ್ ಕರಾರು ಪತ್ರದಲ್ಲಿ ನಮೂದು ಇರುತ್ತದೆ ಎಂದರೆ ಸರಿ. ಸದರ್ ಕರಾರು ಪತ್ರದಂತೆ ಅರ್ಜಿದಾರರಿಗೆ ನಿ.ಆರ್.–2 ರಂತೆ ಪರಿಹಾರವನ್ನು ನೀಡಿದ್ದೇವೆ ಎಂದರೆ ಸರಿ. ಯಾವ ಯಾವ ಸರ್ವೆ ನಂಬರುಗಳು ಎಷ್ಟೆಷ್ಟು ಕ್ಷೇತ್ರದಲ್ಲಿ ಲೈನು ಹಾದು ಹೋಗಿರುತ್ತದೆ ಎಂಬ ಬಗ್ಗೆ ದಾಖಲೆಯು ನಮ್ಮ ಕಚೇರಿಯಲ್ಲಿ ಇರುತ್ತದೆ ಎಂದರೆ ಸರಿ. ಸದರ್ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ.

ಅರ್ಜಿದಾರರ 3 ಎಕರೆ ಜಮೀನಿನಲ್ಲಿ ಲೈನನ್ನು ನಾವು ಎಳೆದಿದ್ದರೂ ಕೂಡ ನಿ.ಆರ್.–2 ರಂತೆ ದಾಖಲೆಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನಿ.ಆರ್–2 ರಂತೆ ಪರಿಹಾರವನ್ನು ಲೈನು ಎಳೆದ ಕ್ಷೇತ್ರ ಮತ್ತು ಡಿ.ಸಿ.ಯವರ ಆದೇಶ ಪ್ರಕಾರ ನೀಡಿರುತ್ತೇವೆ.

ಅರ್ಜಿದಾರರಿಗೆ ರೂ.5,89,170/– ಮಾತ್ರ ಪರಿಹಾರ ನೀಡಿದ್ದೇವೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ನಿ.ಆರ್.–2 ರಂತೆ ಸಂಪೂರ್ಣ ಪರಿಹಾರವನ್ನು ನೀಡಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಬೆಳೆ ನಷ್ಟ ಪರಿಹಾರವನ್ನು ಮಾತ್ರ ಕೊಟ್ಟಿದ್ದೇವೆ ಎಂದರೆ ಮತ್ತು ನಾವು ಅರ್ಜಿದಾರರಿಗೆ ಅರ್ಜಿಯಲ್ಲಿ ಕೇಳಿದಂತೆ ಹೆಚ್ಚಿನ ಪರಿಹಾರದ ಹಣ ಕೊಡಲು ಬಾಧ್ಯಸ್ಥರು ಎಂದರೆ ಸರಿಯಲ್ಲ.

ಲೈನು ಕೆಳಗೆ ಎತ್ತರದ ಮರಗಳನ್ನು ಮತ್ತು ಕಟ್ಟಡಗಳನ್ನು ನಿರ್ಮಾಣ ಮಾಡಲು ಆಗುವುದಿಲ್ಲ ಎಂದರೆ ಸರಿ.

ಮರು ವಿಚಾರಣೆ – ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

*ಓದಿ ಹೇಳಿ ಕೇಳಿ ಸರಿ ಇದೆ.*

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.